# ವಿಶ್ವಶಾಂತಿವಾಹಿನಿ

## ಮಾತಾ ಅಮೃತಾನಂದಮಯಿ ದೇವಿ 'ಅಮ್ಮ'

* ಸಂಧ್ಯಾ ಎಸ್.

ಪ್ರತಿಯೊಬ್ಬರೂ ತಮ್ಮದೇ ಸುಖ ದುಃಖಗಳ ಸಂಕುಚಿತ ಲೋಕದಲ್ಲಿ ಮುಳುಗಿಹೋಗಿರುವ ಇಂದಿನ ಈ ಕಾಲಘಟ್ಟದಲ್ಲಿ, 'ನಿಮ್ಮ ಸುಖದುಃಖಗಳನ್ನು ನನ್ನೊಂದಿಗೆ ಹಂಚಿಕೊಳ್ಳಿರಿ. ಬನ್ನಿ ಮಕ್ಕಳೆ' ಎಂದು ತೆರೆದಬಾಹುಗಳಿಂದ ಇಡೀ ಲೋಕವನ್ನು ತನ್ನೆಡೆಗೆ ಸೆಳೆದುಕೊಳ್ಳುತ್ತಿರುವ ಮಾತಾ ಅಮೃತಾನಂದಮಯಿ ದೇವಿ 'ಅಮ್ಮ' ಜಗತ್ತಿನ ಪಾಲಿಗೆ ಒಂದು ಅಪೂರ್ವ ವರವಾಗಿದ್ದಾರೆ. ಮನುಷ್ಯರ ಆಂತರಿಕ ಪರಿವರ್ತನೆಗೆ, ತನ್ಮೂಲಕ ಇಡೀ ಜಗತ್ತಿನ ಉದ್ಧಾರಕ್ಕೆ ತಮ್ಮ ಜೀವಿತವನ್ನೇ ಮೀಸಲಿಟ್ಟಿರುವ ಪ್ರೇಮಮಯಿ ಅಮ್ಮ ದಿನನಿತ್ಯವೂ ಸಹಸ್ರಾರು ಜನರನ್ನು ಒಬ್ಬೊಬ್ಬರನ್ನಾಗಿ ತಮ್ಮ ಮಡಿಲಲ್ಲಿ ಸ್ವೀಕರಿಸಿಕೊಂಡು, ಅವರ ಸಮಸ್ಯೆಗಳನ್ನು ಆಲಿಸಿ, ಸಾಂತ್ವನ ಪರಿಹಾರಗಳನ್ನು ನೀಡಿ, ಅವರಿಗೆ ಉನ್ನತಿಯ ಮಾರ್ಗವನ್ನು ತೋರುವ ಅಪೂರ್ವ ಕಾರ್ಯವನ್ನು ಎಸಗುತ್ತಿದ್ದಾರೆ. ಜೈವಿಕ ತಾಯಿಯು ತನ್ನ ಮಗುವಿಗೆ ನೀಡುವ ಆಲಿಂಗನವನ್ನು ಅಷ್ಟೇ ಅಕ್ಕರೆಯಿಂದ ಪ್ರತಿಯೊಬ್ಬರಿಗೂ ನೀಡುವ ಉತ್ಸುಕತೆಯಿಂದ ತಾವೇ ದೂರದ ಊರುಗಳಿಗೆ ಯಾತ್ರೆ ಕೈಗೊಂಡು, ಬೃಹತ್ ಕಾರ್ಯಕ್ರಮಗಳನ್ನು ನಡೆಸುತ್ತಾ, ಜನಗಳಿಗಾಗಿ ಜನಗಳ ಬಳಿಗೆ ಸಾಗುತ್ತಿದ್ದಾರೆ. ಸಾಮಾನ್ಯ ಮನಸ್ಸಿಗೆ ಸುಲಭವಾಗಿ ಅರ್ಥವಾಗದ 'ಅದ್ಭುತ'ವೆನಿಸಿದ್ದಾರೆ.

ಇದು ಯಾವುದೋ ಕಾಲದ ಕತೆಯಲ್ಲ. ನಾವು ನೀವು ಬದುಕಿರುವ ಈ ವರ್ತಮಾನದಲ್ಲಿ ಕಣ್ಣಿನಿಂದ ಕಾಣಬಹುದಾದ, ಹೃದಯದಿಂದ ಕಂಡುಕೊಳ್ಳಬಹುದಾದ ವಾಸ್ತವತೆ ಇದು. ವರ್ಣಿಸಲಸದಳವಾದರೂ ಮಾಹಿತಿಗಳ ಸೂತ್ರಹಿಡಿದು ಸತ್ಯದ ಮೇಲ್ಮೈಯನ್ನು ಪರಿಚಯಿಸುವ ಪ್ರಯತ್ನ ಈ ಲೇಖನ.

ಇಂದು ತಂತ್ರಜ್ಞಾನದಿಂದಾಗಿ ಪ್ರಗತಿ ತ್ವರಿತವಾಗಿದೆ. ಆದರೆ ಯಂತ್ರಗಳ ಅತಿಯಾದ ಒಡನಾಟದಿಂದಾಗಿ ಜೀವನ ಯಾಂತ್ರಿಕವಾಗಿದೆ. ಪರಿಣಾಮವಾಗಿ ಮನುಷ್ಯ ತನ್ನಲ್ಲಿರುವ ದಿವ್ಯತೆಯನ್ನು, ಪ್ರೇಮ ಕರುಣೆಗಳನ್ನು, ಸಹಜ ಪ್ರತಿಭೆ ಸಾಮರ್ಥ್ಯಗಳನ್ನು ತಾನೇ ಮರೆತುಕೊಂಡಿದ್ದಾನೆ. ಬುದ್ಧಿಗೆ ಪ್ರಾಧಾನ್ಯತೆ ನೀಡುತ್ತಿರುವ ಮನುಷ್ಯ ಹೃದಯವನ್ನು ದೇಹದ ಒಂದು ಅಂಗಮಾತ್ರವಾಗಿ ಪರಿಗಣಿಸಿದ್ದಾನೆ. ಸರಿ ತಪ್ಪುಗಳ ವಿವೇಚನೆಯಾಗಲೀ, ಮೌಲ್ಯಗಳ ಪಾಲನೆಯಾಗಲೀ ಅಪ್ರಸ್ತುತ ಎನ್ನುವಂತಾಗಿದೆ. ಬುದ್ಧಿಯ ದುರ್ಬಳಕೆಯಿಂದಾಗಿ ಸಮಾಜದಲ್ಲಿ ಹಿಂಸೆ ಅಪರಾಧಗಳು, ಕುಟುಂಬದಲ್ಲಿ ಒಡಕು ವೈಮನಸ್ಯಗಳು, ವ್ಯಕ್ತಿಯಲ್ಲಿ ಮಾರಕ ರೋಗಗಳು, ಮಾನಸಿಕ ರೋಗಗಳು –ಇವೆಲ್ಲಾ ಹೆಚ್ಚುತ್ತಿವೆ. ಈ ಹಿಂಸ್ರ ಪ್ರವೃತ್ತಿಯು ಯುವಜನರಲ್ಲಿ ಮಾತ್ರವಲ್ಲ, ಮಕ್ಕಳಲ್ಲೂ ಪ್ರಕಟವಾಗುತ್ತಿದೆ. ಕುಟುಂಬವೆಂಬ ಸಮಾಜಪೋಷಕ ಸಂಸ್ಕಾರವು ಭಾರತದಲ್ಲೂ ಶಿಥಿಲವಾಗುತ್ತಿದೆ. ಪ್ರೇಮ ಕರುಣೆಗಳು ಮರೆಯಾಗಿ, ಕಾಮ ಮತ್ಸರಗಳೇ ತುಂಬಿ, ಮನಸ್ಸು ಸಂಕುಚಿತವಾಗಿ, ಸ್ವಾರ್ಥತೆಯೇ ಎಲ್ಲಾ ರಂಗಗಳಲ್ಲಿ ಎದ್ದುಕಾಣುತ್ತಿದೆ. ಯಾರಿಗೂ ಶಾಂತಿ ಸಮಾಧಾನಗಳು ಇಲ್ಲವಾಗಿವೆ.

ಹೀಗೆ ವ್ಯಕ್ತಿಯೂ ವಿಶ್ವವೂ ಹಿಂಸೆ ಕ್ರೌರ್ಯಗಳ ಅಟ್ಟಹಾಸದಿಂದ



**ಅಮ್ಮನ ಜನ್ಮದಿನಾಚರಣೆ!**

**ದಿನಾಂಕ: ಅಕ್ಟೋಬರ್ 9, 2017**

**ಸ್ಥಳ: ಅಮೃತಪುರಿ, ಕೊಲ್ಲಮ್ ಜಿಲ್ಲೆ ಕೇರಳ**